MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 4-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ರಫ್ತು ಜೂನ್ ತಿಂಗಳಲ್ಲಿ 7 ರಿಂದ 13 ಶೇಕಡಾ ಇಳಿಕೆ

ಜೂನ್ ತಿಂಗಳ ಮಲೇಶ್ಯಾದ ಪಾಮೆಣ್ಣೆ ರಫ್ತು ಹಿಂದಿನ ತಿಂಗಳಿಗಿಂತ 7 ರಿಂದ 13 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಭಾರತ ಮತ್ತು ಯುರೋಪಿಯನ್ ಯೂನಿಯನ್ ಗಳಿಗೆ ರಫ್ತು ಇಳಿಕೆಗೊಂಡಿದೆಯೆನ್ನಲಾಗಿದೆ. ಪಾಮೆಣ್ಣೆ ದಾಸ್ತಾನು, ಉತ್ಪಾದನೆ ಹೆಚ್ಚಳದ ಭಯದಿಂದ ದರವೂ ಇಳಿಕೆಯಾಗಿದೆ. ಸೋಯಾಬೀನ್ ಎಣ್ಣೆ ದರವೂ ದುರ್ಬಲಗೊಂಡಿದೆ.

## ಜೋಳ ದರ ಬಹುತೇಕ ಮಾರುಕಟ್ಟೆಗಳಲ್ಲಿ ಸ್ಥಿರ, ದಾವಣಗೆರೆಯಲ್ಲಿ ಹೆಚ್ಚಳ

ಬಿಹಾರ ಮತ್ತಿತರ ಪ್ರಮುಖ ಮಾರುಕಟ್ಟೆಗಳಲ್ಲಿ ಜೋಳ ದರ ಸ್ಥಿರವಿದ್ದು, ಮಿಲ್‌ಗಳಿಂದ ಮತ್ತು ಪೌಲ್ಟ್ರಿ ಆಹಾರ ತಯಾರಕರಿಂದ ಬೇಡಿಕೆ ಹೆಚ್ಚಳದಿಂದ ದಾವಣಗೆರೆಯಲ್ಲಿ ಜೋಳ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಭಾರತದ ಅಕ್ಕಿಗೆ ಬೇಡಿಕೆ ಹೆಚ್ಚಳ

ದುರ್ಬಲ ರೂಪಾಯಿ ವಿನಿಮಯ ದರ ಹಾಗೂ ಕಡಿಮೆ ದರ(ಇತರ ದೇಶಗಳಿಗೆ ಹೋಲಿಸಿದಾಗ) ಪ್ರಮುಖ ರಫ್ತುದಾರ ಥೈಲಾಂಡ್ ಹಾಗೂ ವಿಯೆಟ್ನಾಂಗಳಿಗಿಂತ ಸ್ಪರ್ಧಾತ್ಮಕ ದರದಿಂದ ಭಾರತದ ಅಕ್ಕಿಗೆ ರಫ್ತು ಬೇಡಿಕೆ ಹೆಚ್ಚಳವಾಗಿದೆ. ಅಂತರಾಷ್ಟ್ರೀಯ ದರ ಸ್ಥಿರವಿದೆ.

## ಈ ವರ್ಷದ ಪ್ರಥಮಾರ್ದದಲ್ಲಿ ಭಾರತದ ಕಾಫಿ ರಫ್ತು 19 ಶೇಕಡಾ ಹೆಚ್ಚಳ

ಈ ವರ್ಷದ ಪ್ರಥಮಾರ್ದದಲ್ಲಿ ಭಾರತ 2,24,293 ಟನ್ ರಾಬೆಸ್ಟಾ ಹಾಗೂ ಅರೆಬಿಕಾ ಕಾಫಿ ರಫ್ತು ಮಾಡಿದ್ದು ಹಿಂದಿನ ವರ್ಷ ಇದೇ ಅವಧಿಯಲ್ಲಿ 188736 ಟನ್ ಕಾಫಿ ರಫ್ತು ಮಾಡಿತ್ತು. ಈ ವರ್ಷದ ಪ್ರಥಮಾರ್ದದ ರಫ್ತು 19 ಶೇಕಡಾ ಹೆಚ್ಚಳವಾಗಿದೆ. ಅದರಲ್ಲಿ ರಾಬೆಸ್ಟಾ ಕಾಫಿ 132852 ಟನ್‌ಗಳೊಂದಿಗೆ 39.43 ಶೇಕಡಾ ಹೆಚ್ಚಳ ಕಂಡಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ 9528 ಟನ್ ರಾಬೆಸ್ಟಾ ಕಾಫಿ ರಫ್ತಾಗಿತ್ತು. ಅರೆಬಿಕಾ ಕಾಫಿ ರಫ್ತು ಹಿಂದಿನ ವರ್ಷದ 349.5 ಟನ್‌ಗಳಿಂದ 16.75 ಶೇಕಡಾ ಇಳಿಕೆಯಾಗಿ 29.58 ಟನ್‌ಗಳಾಗಿದೆ. ಇನ್‌ಸ್ಟೆಂಟ್ ಕಾಫಿ ರಫ್ತು 16.75 ಶೇಕಡಾ ಇಳಿಕೆಯಾಗಿ 29.58 ಟನ್‌ಗಳಾಗಿದೆ. ಇನ್‌ಸ್ಟೆಂಟ್ ಕಾಫಿ ರಫ್ತು 12794 ಟನ್‌ಗಳಿಂದ 24 ಶೇಕಡಾ ಹೆಚ್ಚಳಗೊಂಡು 15858 ಟನ್‌ಗಳಾಗಿವೆ.

## ಕೆಂಪು ಮೆಣಸು, ಜೀರಿಗೆ, ಅರಸಿನ ದರ ಹೆಚ್ಚಳ ರಫ್ತು ಇಳಿಕೆ

ದೇಶದ ಒಟ್ಟು ರಫ್ತಿನಲ್ಲಿ ಶೇಕಡಾ 50 ಪಾಲನ್ನೊಳಗೊಂಡ ಕೆಂಪು ಮೆಣಸು, ಜೀರಿಗೆ, ಅರಸಿನ ದರ ರಫ್ತು ಇಳಿಕೆಯಿಂದಾಗಿ ಈ ವರ್ಷ ಸಂಬಾರು ಜಿನಸಿಗಳ ರಫ್ತು 13 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಉತ್ಪಾದನೆ ಇಳಿಕೆಯಿಂದಾಗಿ ಕೆಂಪು ಮೆಣಸು, ಜೀರಿಗೆ, ಅರಸಿನ ದರಗಳು ಹೆಚ್ಚಳದಲ್ಲಿದೆ. ಚೀನಾ ಹಾಗೂ ಯುರೋಪಿಯನ್ ಯೂನಿಯನ್‌ಗಳ ರಫ್ತು ನೀತಿ ಹಾಗೂ ಯುರೋಪಿನ ಕೆಲವು ಗುಣಮಟ್ಟದ ಹಾಗೂ ರಾಸಾಯನಿಕ ಮಟ್ಟಗಳಿಗೆ ನಿರ್ಬಂಧದಿಂದ ರಫ್ತು ವಿಳಂಬವಾಗುತ್ತಿದೆ ಹಾಗೂ ಯುರೋಪ್‌ನಲ್ಲಿ ಕೆಲವು ವಸ್ತುಗಳು ಸ್ವೀಕೃತಿಯಾಗುತ್ತಿಲ್ಲವೆನ್ನಲಾಗಿದೆ.